ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ದಿನಾಂಕ ನಿಗದಿಪಡಿಸಲು ಆಗ್ರಹ

ವಿಜಯಪುರ: ವಿಜಯಪುರ ಪುರಸಭೆಗೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ದಿನಾಂಕ ನಿಗದಿಪಡಿಸುವಂತೆ ವಿಜಯಪುರದ ಅಲ್ಪಸಂಖ್ಯಾತರ ಮುಖಂಡರಾದ ರಫಿಹುಲ್ಲಾ ಮತ್ತು ಎಸ್. ರಿಯಾಜ್ ಅವರು ಒತ್ತಾಯಿಸಿದ್ದಾರೆ.

ವಿಜಯಪುರ ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡು ತಿಂಗಳ ಹಿಂದೆ ರಾಜ್ಯ ಸರ್ಕಾರವು ಪುರಸಭೆಗಳ ಮೀಸಲಾತಿ ಪ್ರಕಟ ಮಾಡಿದ್ದು, ಎರಡು ತಿಂಗಳು ಕಳೆದರೂ ಇನ್ನೂ ದಿನಾಂಕ ನಿಗದಿಪಡಿಸದೆ ಅಧಿಕಾರಿಗಳು ಸುಮ್ಮನಿದ್ದಾರೆ. ವಿಜಯಪುರ ಪುರಸಭೆ ಆಡಳಿತ ಚುಕ್ಕಾಣಿ ಹಿಡಿಯಲು ಪುರಸಭಾ ಸದಸ್ಯರು ಕಾತುರದಲ್ಲಿದ್ದು, ಇನ್ನೂ ಸಹ ದಿನಾಂಕ ನಿಗದಿಪಡಿಸಿದೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಈ ಕೂಡಲೇ ಅಧ್ಯಕ್ಷ-ಉಪಾಧ್ಯಕ್ಷರು ಚುನಾವಣೆಗೆ ದಿನಾಂಕ ನಿಗದಿಪಡಿಸುವಂತೆ ಅವರು ಒತ್ತಾಯಿಸಿದರು. ವಿಜಯಪುರ ಪುರಸಭೆಯು ಉತ್ತಮ ಆಡಳಿತ ನೀಡಿ ರಾಜ್ಯದಲ್ಲಿ ಎರಡು ಬಾರಿ ಪ್ರಶಸ್ತಿ ಪಡೆದಿದ್ದು, ಕಳೆದ 15 ದಿನಗಳಿಂದ ಮತ್ತೊಂದು ಪ್ರಶಸ್ತಿಯನ್ನು ತನ್ನ ಮಡಿಲಿಗೆ ಹಾಕಿಕೊಂಡಿದೆ. ವಿಜಯಪುರ ಪುರಸಭೆಯಲ್ಲಿ ಉತ್ತಮ ಆಡಳಿತ ನೀಡಲು ಪುರಸಭಾ ಸದಸ್ಯರು ಸನ್ನದ್ಧರಾಗಿದ್ದು, ಜಿಲ್ಲಾಧಿಕಾರಿಗಳು ಈ ಕೂಡಲೇ ದಿನಾಂಕವನ್ನು ನಿಗದಿಪಡಿಸಬೇಕೆಂದು ಆಗ್ರಹಿಸಿದರು.

ಅಹವಾಲು ಸ್ವೀಕಾರ ಇಂದು

ರಾಮನಗರ: ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಮಾಗಡಿ, ಕನಕಪುರ ಹಾಗೂ ಹಾರೋಹಳ್ಳಿ ತಹಶೀಲ್ದಾರರ ಕಚೇರಿಯಲ್ಲಿ ಇದೇ ಸೆ. 4ರ ಬುಧವಾರ ಬೆಳಿಗ್ಗೆ 11 ರಿಂದ 12ರ ವರೆಗೆ ಸಾರ್ವಜನಿಕ ರಸ್ತೆ ಒತ್ತುವರಿ ಸಮಸ್ಯೆಗಳ ಕುರಿತು ಅಹವಾಲುಗಳನ್ನು ಸ್ವೀಕರಿಸಲು ಅದಾಲತ್ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕ ರಸ್ತೆ ಒತ್ತುವರಿ ತೆರವುಗೊಳಿಸುವ ಬಗ್ಗೆ ಈ ಅದಾಲತ್‌ನಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ಜಿಲ್ಲೆಯ ಎಲ್ಲಾ ತಹಸೀಲ್ದಾರರಿಗೆ ಸೂಚಿಸಿದ್ದಾರೆ.

ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ರೈತರು, ಸಾರ್ವಜನಿಕರು ತಾವು ಎದುರಿಸುತ್ತಿರುವ ಸಾರ್ವಜನಿಕ ರಸ್ತೆ ಒತ್ತುವರಿ ಬಗ್ಗೆ ಆಯಾ ತಾಲೂಕಿನ ತಹಸೀಲ್ದಾರರ ಕಚೇರಿಗೆ ಖುದ್ದು ಹಾಜರಾಗಿ ಅರ್ಜಿ, ಮನವಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಮಾಗಡಿ ಪಟ್ಟಣದ ತಾಪಂ ಆವರಣದಲ್ಲಿ ತಾಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕುಂದು-ಕೊರತೆ ಸಭೆ ಶಾಸಕ ಎಚ್.ಸಿ.ಬಾಲಕೃಷ್ಣ ಅಧ್ಯಕ್ಷತೆಯಲ್ಲಿ ನಡೆಯಿತು.

ಅಧಿಕಾರಿಗಳ ಗೈರು: ಕ್ರಮಕ್ಕೆ ಸೂಚನೆ

ಸಂ.ಕ. ಸಮಾಚಾರ, ಮಾಗಡಿ

ಕುಂದುಕೊರತೆ ಸಭೆಯಲ್ಲಿ ಗೈರು ಹಾಜರಾದ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.

ತಾಲೂಕು ಪಂಚಾಯಿತಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕುಂದು-ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕುಂದು ಕೊರತೆ ಸಭೆಗೆ ಗೈರು ಹಾಜರಾದ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಿ ತಾಲೂಕು ಪಂಚಾಯಿತಿ ಅವರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಕಾಟಾಚಾರಕ್ಕೆ ಸಭೆ ಆಗಬಾರದು ಸಭೆಯಲ್ಲಿ ನೀಡಿದ ಅರ್ಜಿಗಳಿಗೆ ಅಧಿಕಾರಿಗಳೇ ನೇರವಾಗಿ ಹೊಣೆಯನ್ನು ವಹಿಸಿಕೊಂಡು ಮುಂದಿನ ಸಭೆಯಲ್ಲಿ ಬರುವಾಗ ಅರ್ಜಿಗೆ ಸರಿಯಾದ ಉತ್ತರ ಕೊಡಬೇಕು ಕಾನೂನು ಪ್ರಕಾರವಾಗಿ ಅರ್ಜಿ ವಿಲೇವಾರಿ ಮಾಡುವುದಾದರೆ ಅಧಿಕಾರಿಗಳು ಮೀನಾ ಮೇಷ ಎಣಿಸದೆ ಅರ್ಜಿ ಇತ್ಯರ್ಥ ಪಡಿಸಬೇಕು ಇಲ್ಲವಾದರೆ ಅದಕ್ಕೆ ಸರಿಯಾದ ಉತ್ತರವನ್ನು ಬರೆಯುವ ಕೆಲಸವನ್ನು ಅಧಿಕಾರಿಗಳು ಮಾಡಬೇಕು ಇಲ್ಲವಾದರೆ ನೇರವಾಗಿ ಅಧಿಕಾರಿಗಳೇ ಹೊಣೆಯಾಗುತ್ತಾರೆ ಮತ್ತು ತಹಸೀಲ್ದಾರ್ ಅವರು ಈ ಬಗ್ಗೆ ಕ್ರಮ ವಹಿಸುವಂತೆ ಸೂಚನೆ ನೀಡಲಾಗುತ್ತದೆ ಎಂದು ಶಾಸಕರು ಎಚ್ಚರಿಕೆ ನೀಡಿದರು.

ಲ್ಯಾಬ್‌ಗಳಲ್ಲಿ ದರಪಟ್ಟಿ ಹಾಕಲು ಸೂಚನೆ: ತಾಲ್ಲೂಕಿನಲ್ಲಿರುವ ಖಾಸಗಿ ಲ್ಯಾಬ್‌ಗಳಲ್ಲಿ ರಕ್ತ ಪರೀಕ್ಷೆ ಸೇರಿದಂತೆ ತಾವು ಮಾಡುವ ಪರೀಕ್ಷೆಗಳಿಗೆ ದರಪಟ್ಟಿಯನ್ನು ಹಾಕುವ ಕೆಲಸ ಮಾಡಬೇಕು ಹೆಚ್ಚುವರಿ ಯಾಗಿ ಸಾರ್ವಜನಿಕರಿಂದ ಹಣ ಪಡೆದರೆ ಅಂತಹವರ ವಿರುದ್ಧ ತಾಲೂಕು ಆರೋಗ್ಯ ಅಧಿಕಾರಿಗಳು ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು ರಕ್ತ ಪರೀಕ್ಷೆಗೆ 1700 ರೂ. ಹಣ ಪಡೆಯುತ್ತಿದ್ದಾರೆ ಎಂದು ದಲಿತ ಮುಖಂಡ ಮಂಜೇಶ್ ಆರೋಪಕ್ಕೆ ಶಾಸಕರು ಆರೋಗ್ಯ ಇಲಾಖೆಗೆ ದರ ಪಟ್ಟಿ ಆಗುವಂತೆ ಸೂಚನೆ ನೀಡಿದರು.

ರಾಜ್ಯದಲ್ಲೇ ಮೊದಲ ಬಾರಿಗೆ ದಾಖಲಾತಿಗಳ ಸ್ಕ್ಯಾನಿಂಗ್: ರಾಜ್ಯದಲ್ಲೇ ಪ್ರಥಮ ಬಾರಿಗೆ ಮಾಗಡಿ ತಾಲೂಕು ಕಚೇರಿಯಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ ದಾಖಲಾತಿಗಳನ್ನು ಸ್ಕ್ಯಾನಿಂಗ್ ಮಾಡಿ ಕಂಪ್ಯೂಟರ್ ನಲ್ಲಿ ಬರುವ ಕೆಲಸ ಮಾಡಲಾಗುತ್ತಿದ್ದು ಸಾರ್ವಜನಿಕರು ಕಂದಾಯ ಇಲಾಖೆಯ ದಾಖಲಾತಿಗಳನ್ನು ಪಡೆಯಲು ಇನ್ನು ಮುಂದೆ ವಿಳಂಬವಾಗುವುದಿಲ್ಲ ರಾಜ್ಯದಲ್ಲೇ ಮಾದರಿಯಾಗಿ ಸ್ಕ್ಯಾನಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಗುಂಡು ತೋಪು ಜಾಗದಲ್ಲೂ ಸ್ಮಶಾನ ನಿರ್ಮಾಣ ಮಾಡಲು ಅವಕಾಶ: ಯಾವ ಗ್ರಾಮದಲ್ಲಿ ಸರ್ಕಾರಿ ಗೋಮಾಳ ಜಾಗ ಸ್ಮಶಾನಕ್ಕೆ ಸಿಗುವುದಿಲ್ಲವೋ ಅಂತಹ ಗ್ರಾಮಗಳಲ್ಲಿ ಸರ್ಕಾರಿ ಗುಂಡು ತೋಪಿನಲ್ಲೂ ಕೂಡ ಸ್ಮಶಾನ ಮಾಡಲು ಅವಕಾಶ ಇರುವುದರಿಂದ ತಹಸಿಲ್ದಾರ್ ಅವರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಅಂತಹ ಗ್ರಾಮಗಳಿಗೆ ಸ್ಮಶಾನ ಜಾಗವನ್ನು ಗುರುತಿಸುವ ಕೆಲಸ ಮಾಡಬೇಕು ಶಾಸಕರು ಸೂಚನೆ ನೀಡಿದರು.

ತಹಸೀಲ್ದಾರ್ ಶರತ್ ಕುಮಾರ್, ತಾಪಂ ಇಒ ಜೈಪಾಲ್, ಕುಂದು-ಕೊರತೆ ಮಿತಿ ಸದಸ್ಯರಾದ ನರಸಿಂಹಮೂರ್ತಿ, ಪೊಲೀಸ್ ಇನ್‌ಸ್ಪೆಕ್ಟರ್ ಗಿರಿರಾಜ್, ಸಮಾಜ ಕಲ್ಯಾಣ ಇಲಾಖೆ ತಾಲ್ಲೂಕು ಅಧಿಕಾರಿ ಪ್ರಕಾಶ್ ಸೇರಿದಂತೆ ಹಲವರಿದ್ದರು.

ಬೀದಿ ಬದಿ ವ್ಯಾಪಾರಿಗಳಿಗೆ ಮೂರು ದಿನಗಳ ಕಾಲಾವಕಾಶ

ಸಂ.ಕ. ಸಮಾಚಾರ, ಆನೇಕಲ್

ರಸ್ತೆ ಬದಿಯಲ್ಲಿ ಅನಧಿಕೃತವಾಗಿ ತಲೆ ಎತ್ತಿದ ಬೀದಿ ವ್ಯಾಪಾರ ತೆರವುಗೊಳಿಸುವಂತೆ ಉಪ ಲೋಕಾಯುಕ್ತ ಆದೇಶ ನೀಡಿದ ಹಿನ್ನೆಲೆಯಲ್ಲಿ ಬನ್ನೇರುಘಟ್ಟ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಸಿಬ್ಬಂದಿ ತೆರವು ಮಾಡಲು ಹೋದಾಗ ಇನ್ನು ಮೂರು ದಿನಗಳ ಕಾಲಾವಕಾಶ ನೀಡುವಂತೆ ವ್ಯಾಪಾರಿಗಳು ಮನವಿ ಮಾಡಿದ್ದಾರೆ.

ಈ ಸಂದರ್ಭ ಬನ್ನೇರುಘಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಂಜುನಾಥ ಅವರು ಮಾತನಾಡಿ, ಈಗಾಗಲೇ 15 ದಿನಗಳ ಹಿಂದೆ ಬೀದಿ ವ್ಯಾಪಾರಿಗಳಿಗೆ ನೋಟಿಸ್ ಅನ್ನು ನೀಡಿದ್ದೇವೆ. ಮಾನವೀಯತೆ ದೃಷ್ಟಿಯಿಂದ ಮತ್ತೆ ಮೂರು ದಿನಗಳ ಕಾಲಾವಕಾಶ ನೀಡಿದ್ದೇವೆ. ಒಂದು ವೇಳೆ ತೆರವು ಮಾಡದೆ ಇದ್ದ ಪಕ್ಷದಲ್ಲಿ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.

ಬನ್ನೇರುಘಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಮೇಶ್ ಮಾತನಾಡಿ, ಇತ್ತೀಚೆಗೆ ಉಪ ಲೋಕಾಯುಕ್ತ ಅಧಿಕಾರಿ ಪಂಚಾಯಿತಿಗೆ ಭೇಟಿ ನೀಡಿದಾಗ ಮುಖ್ಯರಸ್ತೆಯಲ್ಲಿ ಬೀದಿಬದಿ ವ್ಯಾಪಾರಿಗಳು ಒತ್ತುವರಿ ಮಾಡಿ ರಸ್ತೆಯನ್ನು ಕಿರಿದಾಗಿ ಮಾಡಿಕೊಂಡಿದ್ದಾರೆ. ಆ ಜಾಗವನ್ನು ತೆರವು ಮಾಡುವಂತೆ ಹೇಳಿದರು. ಅವರು ಆದೇಶದಂತೆ ಬೀದಿಬದಿ ವ್ಯಾಪಾರಿಗಳಿಗೆ ನೋಟಿಸ್ ನೀಡಿದ್ದೇವೆ. ಮಂಗಳವಾರ ಕೂಡ ತೆರವಿಗೆ ಹೋಗಿದ್ದೇವು. ಆದರೆ, ವ್ಯಾಪಾರಿಗಳು ಕಾಲಾವಕಾಶ ಕೇಳಿದ್ದರಿಂದ ವಾಪಾಸ್ ಆಗಿದ್ದೇವೆ ಎಂದರು.

ಗೊಲ್ಲರ ಹಟ್ಟಿಯಲ್ಲಿ ಬೀಸದ ಆಧುನೀಕತೆಯ ಗಾಳಿ

ರಾಮನಗರ: ಆಧುನೀಕತೆಯ ಗಾಳಿ ಎಲ್ಲೆಡೆ ಬೀಸುತ್ತಿದೆ. ಆದರೆ, ಗೊಲ್ಲರ ಹಟ್ಟಿಗಳ ನಡುವೆ ಇನ್ನೂ ಬೀಸಿಲ್ಲ. ಸಂಪ್ರದಾಯ ಹಾಗೂ ಆಚಾರಗಳ ಮೂಟೆಯಿಂದ ಹೊರಬರದ ಈ ಸಮಾಜದಲ್ಲಿ ಮೌಢ್ಯತೆಯ ಹಲ್ಲುಗಳಿಗೆ ಈಗಲೂ ಹೆಣ್ಣೇ ಆಹಾರ ಎಂದು ಬೆಂಗಳೂರಿನ ಕೆ.ಆರ್. ಪುರಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಂಯೋಜಕ ಪ್ರೊ.ಟಿ. ಯಲ್ಲಪ್ಪ ತಿಳಿಸಿದರು.

ಬೆಂಗಳೂರಿನ ಕೆ.ಆರ್. ಪುರಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರದಿಂದ ತಾಲೂಕಿನ ಕೈಲಾಂಚ ಹೋಬಳಿಯ ಆಲೆಮರದದೊಡ್ಡಿ ಹಾಗೂ ದೇವರದೊಡ್ಡಿಯಲ್ಲಿ ವಾಸವಾಗಿರುವ ಕಾಡುಗೊಲ್ಲ ಸಮುದಾಯ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ಕ್ಷೇತ್ರ ಕಾರ್ಯದಲ್ಲಿ ಅವರು ಮಾತನಾಡಿದರು.

ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ತೀರ ಹಿಂದುಳಿದಿರುವ ಈ ಸಮುದಾಯದಲ್ಲಿ ಹೆಣ್ಣು ಸಬಲೆ ಎಂಬ ಮಾತು ಕಲ್ಪನೆಗೂ ನಿಲುಕದ ಸಂಗತಿಯಾಗಿದೆ ಎಂದರು. ಮಕ್ಕಳ ಹಡೆದ ತಾಯಿಗೆ ಊರ ಹೊರಗಿನ ಗುಡಿಸಲೇ ವಾಸ ಸ್ಥಾನ. ಋತುಮತಿಯಾದ ಮನೆ ಮಗಳು ಹಟ್ಟಿಯಿಂದ ಹೊರಗೆ. ಮುರುಕಲು ಜೋಪಡಿ, ಗಾಳಿ, ಮಳೆ, ಬಿಸಿಲೇ ಇವಳ ಸಂಗಾತಿ. ಗೊಲ್ಲರ ಸಮುದಾಯದಲ್ಲಿ ಜನನ ಸಂಬಂಧಿ ಆಚರಣೆಗಳು ಕಠಿಣವಾಗಿರುತ್ತವೆ ಎಂದು ತಿಳಿಸಿದರು.

ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಹ ಪ್ರಾಧ್ಯಾಪಕ ಡಾ. ಎಂ. ನಾಗರಾಜು ಮಾತನಾಡಿ, ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುವ ಈ ಎಲ್ಲಾ ವೈಶಿಷ್ಟ್ಯ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಗುರುತಿಸಿ ಅಧ್ಯಯನ ಮಾಡಬೇಕು ಎಂದು ತಿಳಿಸಿದರು.

ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಪ್ರಾಧ್ಯಾಪಕಿ ಡಾ. ವಿಜಯಲಕ್ಷ್ಮಿ ಮಾತನಾಡಿ, ಮೂಢನಂಬಿಕೆ ನಿಷೇಧ ಕಾಯ್ದೆ ಜಾರಿಗೆ ತರಲು ಹೊರಟಿರುವ ಸರ್ಕಾರದ ಕ್ರಮ ಗೊಲ್ಲರ ಸಮುದಾಯದ ಹೆಣ್ಣುಮಕ್ಕಳ ಪಾಲಿಗೆ ಆಶಾಕಿರಣವಾಗಿದೆ ಎಂದು ತಿಳಿಸಿದರು. ಕೆ.ಆರ್. ಪುರಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕರಾದ ಡಾ. ಶರಣಪ್ಪ, ಜನಾರ್ದನ, ಮಂಜುನಾಥ್, ಚಂದ್ರೇಶೇಖರ್ ಇದ್ದರು.

ವಸೂಲಾತಿ ಅಧಿಕಾರಿಯವರ ಕಚೇರಿ 1/2
ಸಾಲ ವಸೂಲಾತಿ ನ್ಯಾಯಾಧಿಕರಣ-1, ಕರ್ನಾಟಕ
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು - 560 001.

ಫಾರಂ ನಂ. 14 (ರೆಗ್ಯುಲೇಷನ್ 33(2))
ಡಿಮ್ಯಾಂಡ್ ನೋಟೀಸು
ರಿಕವರಿ ಆಫ್ ಡೆಟ್ಸ್ ಅಂಡ್ ಬ್ಯಾಂಕರಪ್ಸಿ, ಆಕ್ಟ್ 1993ರ ಸೆಕ್ಷನ್ 25 ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸು.
ಆರ್ ಸಿ ನಂ.159/2024 ಒ.ಎ. ನಂ. 720/2021
ಕರ್ನಾಟಕ ಬ್ಯಾಂಕ್ ಲಿಮಿಟೆಡ್ ವಿರುದ್ಧ ಮೆ. ಎಂ. ಎಸ್. ಕನ್‌ಸ್ಟ್ರಕ್ಷನ್ಸ್
ಇದರ ವಿಷಯದಲ್ಲಿ: (ಸಿಹೆಚ್ 1), ಕರ್ನಾಟಕ ಬ್ಯಾಂಕ್ ಲಿ., ಹೆಚ್‌ಎಂಟಿ ಲೇಔಟ್ ಶಾಖೆ, ನಾಗಸಂದ್ರ ಬೆಂಗಳೂರು, ಬೆಂಗಳೂರು ನಗರ ಜಿಲ್ಲೆ, ... ಅರ್ಜಿದಾರ ಬ್ಯಾಂಕ್/ಸರ್ಟಿಫಿಕೇಟ್ ಹೋಲ್ಡರ್
ವಿರುದ್ಧ
(ಸಿಡಿ1) : ಮೆ. ಎಂ. ಎಸ್. ಕನ್‌ಸ್ಟ್ರಕ್ಷನ್ಸ್ ನಂ. 37/1, 2ನೇ ಮಹಡಿ, 1ನೇ ಆಡ್ಡ ರಸ್ತೆ, ಮಾಡೆಲ್ ಕಾಲೊನಿ, ಯಶವಂತಪುರ, ಫ್ಲವರ್ ಮಾರ್ಕೆಟ್ ರಸ್ತೆ ಎದುರು, ಬೆಂಗಳೂರು- 560 022, ಪ್ರತಿನಿಧಿಸುವವರು ಇದರ ಮಾಲೀಕರಾದ ಶ್ರೀ ಎನ್. ಮಂಜುನಾಥ S/o. ಶ್ರೀ ನಾಗರಾಜ ಸಿ.,
(ಸಿಡಿ 2) : ಶ್ರೀ ಮಂಜುನಾಥ ಎಂ. ಎನ್. S/o. ಶ್ರೀ ನಾಗರಾಜ ಸಿ., ವಾಸ: ನಂ. 78/2, 13ನೇ ಆಡ್ಡ ರಸ್ತೆ, ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.
(ಸಿಡಿ 3) : ಶ್ರೀಮತಿ ಕವಿತಾ ಕೆ. W/o ಶ್ರೀ ಮಂಜುನಾಥ ಎಂ. ಎನ್, ವಾಸ: ನಂ. 78/2, 13ನೇ ಆಡ್ಡ ರಸ್ತೆ, ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು. .....ಸರ್ಟಿಫಿಕೇಟ್ ಹೋಲ್ಡರ್
ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕಣ, ಬೆಂಗಳೂರು (ಡಿಆರ್‌ಟಿ-1) ಇವರು ಒ.ಎ. ನಂ. 720/2021 ರಲ್ಲಿ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ ರೂ. 9656219.76 (ರೂಪಾಯಿ ತೊಂಬತ್ತಾರು ಲಕ್ಷ ಐವತ್ತಾರು ಸಾವಿರ ಇನ್ನೂರ ಹತ್ತೊಂಬತ್ತು ಮಾತ್ರ) ಜೊತೆಗೆ 1) ಪ್ರತಿವಾದಿಗಳು ರೂ.82,26,530.80 ಮೊತ್ತ ಮತ್ತು ಖರ್ಚು, ವೆಚ್ಚ ಹಾಗೂ ವಾರ್ಷಿಕ ಶೇ.13.60%ಬಡ್ಡಿ ವಾಸಿಕ ವಿಶ್ರಾಂತ ಚಕ್ರಬಡ್ಡಿ ಪಾವತಿಸಬೇಕಿದೆ. 2) ಪ್ರತಿವಾದಿಗಳು ರೂ.1429688.96 ಮೊತ್ತ ಮತ್ತು ವಾರ್ಷಿಕ ಶೇ.15.35% ಬಡ್ಡಿ ದಿನಾಂಕ 03.09.2021ರಂತೆ ಮಾಸಿಕ ಚಕ್ರಬಡ್ಡಿ ಪೂರ್ತಿ ಪಾವತಿಯ ವರೆಗಿನ ಬಡ್ಡಿಯನ್ನು ಹಾಗೂ ರೂ.158905/- (ರೂಪಾಯಿ ಒಂದು ಲಕ್ಷ ಐವತ್ತೆಂಟು ಸಾವಿರದ ಒಂಬೈನೂರ ಐದು ಮಾತ್ರ) ನಿಮ್ಮಿಂದ (ಜಂಟಿಯಾಗಿ ಮತ್ತು ಪ್ರತ್ಯೆಕವಾಗಿ/ಪೂರ್ತಿಯಾಗಿ/ ಮಿತವಾಗಿ) ಬಾಕಿ ಇರುತ್ತದೆ.

ಸಿಡಿ ಹೆಸರು	ಬಡ್ಡಿ ವಿಧ/ ರೀತಿ	ಬಡ್ಡಿ ದರ	ಅಸ್ತಿಯಿಸುವ ದಿನಾಂಕ	ಆದೇಶದ ದಿನಾಂಕ	ಮೊತ್ತ (ರೂ.)	ಬಾಕಿಯ ವಿಧ	ಆರ್‌ಸಿ ಮೊತ್ತ ರೂ.
(ಸಿಡಿ1) : ಮೆ. ಎಂ. ಎಸ್. ಕನ್‌ಸ್ಟ್ರಕ್ಷನ್ಸ್ ಪ್ರತಿನಿಧಿ ಮಾಲೀಕರು: ಶ್ರೀ ಎನ್. ಮಂಜುನಾಥ (ಸಿಡಿ 2): ಶ್ರೀಮಂಜುನಾಥ ಎಂ. ಎನ್. (ಸಿಡಿ 3) : ಶ್ರೀಮತಿ ಕವಿತಾ ಕೆ.	ಚಕ್ರಬಡ್ಡಿ (ಮಾಸಿಕ)	13.60% p.a.	03.09.2021	30.06.2023	Rs. 226530.80	ಜಂಟಿ ಮತ್ತು ಪ್ರತ್ಯೆಕ ವಾಗಿ	9656219.76
	ಚಕ್ರಬಡ್ಡಿ (ಮಾಸಿಕ)	15.35% p.a.	03.09.2021	30.06.2023	Rs. 142968.96	ಜಂಟಿ ಮತ್ತು ಪ್ರತ್ಯೆಕ ವಾಗಿ	

(2) ನೀವು ಸದರಿ ಮೊತ್ತವನ್ನು ಈ ನೋಟೀಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್/ಡ್ಯೂ ಬ್ಯಾಂಕ್ಸ್ ಅಂಡ್ ಫೈನಾನ್ಷಿಯಲ್ ಇನ್ಸಿಟಿಟ್ಯೂಷನ್ಸ್ ಆಕ್ಟ್, 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. (3) ನಿಮಗೆ ಈ ಮೂಲಕ ಸೂಚಿಸುವುದೇನೆಂದರೆ ಮುಂದಿನ ವಿಚಾರಣೆಯ ದಿನಾಂಕದಂದು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್ ಮೂಲಕ ಘೋಷಿಸಬೇಕೆಂದು ಆದೇಶ ನೀಡಲಾಗಿದೆ. (4) ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ಈ ನೋಟೀಸನ್ನು ನೀಡಿದ 15 ದಿನಗಳ ಒಳಗೆ ಕೆಳಸಹಿದಾರರ ಮುಂದೆ ಹಾಜರಾಗಬೇಕು. (5)ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ಮುಂದಿನದಕ್ಕೂ ಬಾಧ್ಯರಾಗುತ್ತೀರಿ :(ಎ)ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಆವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ.